150 ಶ್ರೀ. ಕರಡಿ ಸಂಗಣ್ಣ ಅಮರಪ್ಪ
ಮಾನ್ಯ ಗೃಹ ಸಚಿವರು

1. ಕೊಪ್ಪಳ ನಗರವು ಜಿಲ್ಲಾ ಕೇಂದ್ರವಾಗಿದ್ದು ವಾಹನ ದಟ್ಟಣೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದೆಯೇ.

ಹೌದು, ಕೊಪ್ಪಳ ನಗರವು ಜಿಲ್ಲಾ ಕೇಂದ್ರವಾಗಿದ್ದು ವಾಹನ ದಟ್ಟಣೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

2. ಹಾಗಿದ್ದಲ್ಲಿ ಈವರೆಗೂ ಸಂಚಾರಿ ಠಾಣೆಯನ್ನು ಪ್ರಾರಂಭಿಸದಿರಲು ಕಾರಣಗಳೇನು;

ಈಗಿನ ಭಯೋತ್ಪಾದಿತರ ಹಾಗೂ ಇತರ ಅಪರಾಧದ ತೀವ್ರತೆಗಳನ್ನು ಪರಿಗಣಿಸಿ ರಾಜ್ಯದಲ್ಲಿ ಹೊಸ ಪೊಲೀಸ್ ಠಾಣೆ, ಹೊರಠಾಣೆ ಮತ್ತು ಹೊರಠಾಣೆ ಮೇಲ್ದಜೇಗೇರಿಸುವ ಪ್ರಸ್ತಾವನೆಗಳನ್ನು ಪರಿಗಣಿಸಲು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ರೂಪಿಸಲು ನಿವೃತ್ತ ಡಿ.ಜಿ.ಪಿ. ಶ್ರೀ.ಎಸ್.ಮರಿಸ್ವಾಮಿ ಇವರ ಅಧ್ಯಕ್ಷತೆಯಲ್ಲಿ ಒಂದು ತಜ್ಞರ ಸಮಿತಿಯನ್ನು ರಚಿಸಲು ಪತ್ರ ಸಂಖ್ಯೆ: ಹೆಚ್‌ಡಿ/207/ಪಿಒಪಿ/2008 ದಿನಾಂಕ: 31-12-08ರಲ್ಲಿ ಸರ್ಕಾರದ ಅನುಮತಿ ನೀಡಿದೆ. ಈ ಸಮಿತಿಯು ನೀಡುವ ವರದಿಯ ಆಧಾರದ ಮೇಲೆ ಸೂಕ್ತ ಮಾರ್ಗಸೂಚಿಗಳನ್ನು ರೂಪಿಸಿ. ಅದರನ್ವಯ ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

3. ಕೊಪ್ಪಳ ನಗರದಲ್ಲಿ ಸಂಚಾರಿ ಆರಕ್ಷಕ ಠಾಣೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು

4. ಹಾಗಿದ್ದಲ್ಲಿ, ಸಂಚಾರಿ ಆರಕ್ಷಕ ಠಾಣೆಯನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಪ್ರಶ್ನೆ [2]ಕ್ಕೆ ನೀಡಿದ ಉತ್ತರದಂತೆ

84 ಶ್ರೀ. ಟಿ.ಬಿ.ಜಯಚಂದ್ರ
ಗೃಹ ಸಚಿವರು

ಅ ಶ್ರೀ. ಎ.ಆರ್.ರಾಜೇಂದ್ರಕುಮಾರ್, ನಂ.1523, ಲಕ್ಷ್ಮೀನಿವಾಸ್, ವಿಶ್ವಭವನ್, 5ನೇ ಸ್ಟೇಜ್, 1ನೇ ಫೇಸ್, 1ನೇ ಕ್ರಾಸ್, ಬೆಮೆಲ್ ಲೇಔಟ್, ರಾಜರಾಜೇಶ್ವರಿನಗರ, ಬೆಂಗಳೂರು ಇವರು ಅನೇಕ ಉತ್ಪನ್ನಗಳನ್ನು ಕಂಡುಹಿಡಿದ ವಿಜ್ಞಾನಿಯಾಗಿದ್ದು, ಇವರಿಗೆ ಉಗ್ರಗ್ರಾಮಿಗಳಿಂದ ಅಕ್ರಮಣದ ಭೀತಿಯಿದ್ದು, ಅನೇಕ ಬಾರಿ ರಕ್ಷಣೆಯನ್ನು ಕೋರಿ ಮನವಿ ಮಾಡಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ.

ಶ್ರೀ. ಎ.ಆರ್.ರಾಜೇಂದ್ರಕುಮಾರ್ ರವರು ರಕ್ಷಣೆ ಕೋರಿ ಮನವಿ ನೀಡಿರುವುದು ಗಮನಕ್ಕೆ ಬಂದಿದೆ.

ಆ ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಇವರ ನಿವಾಸಕ್ಕೆ ರಾಜರಾಜೇಶ್ವರಿನಗರ ಪೊಲೀಸ್ ಠಾಣೆಯಿಂದ ಪಾಯಿಂಟ್ ಪುಸ್ತಕಗಳನ್ನು ಇಟ್ಟು, ಗಸ್ತು ಸಿಬ್ಬಂದಿಗಳು ಹಾಗೂ ಚೀತಾ ಹೊಯ್ಸಳ ವಾಹನಗಳು ಮತ್ತು ಗಸ್ತಿನ ಅಧಿಕಾರಿಗಳು ಹಗಲು ಮತ್ತು ರಾತ್ರಿಯ ವೇಳೆಯಲ್ಲಿ ಆಗಿಂದಾಗ್ಗೆ ಭೇಟಿ ನೀಡಿ ಚೆಕ್‌ಮಾಡಿ ರಕ್ಷಣೆ ನೀಡುತ್ತಿರುತ್ತಾರೆ ಹಾಗೂ ಇವರು ವಾಸ ಮಾಡುವ ನಿವಾಸದ ಬಳಿ ನಿಗಾ ಇಡಲಾಗಿದೆ.

ಇ ಇತ್ತೀಚೆಗೆ ಬೆಂಗಳೂರಿನಲ್ಲಿ ಉಗ್ರಗಾಮಿಗಳು ವಿಜ್ಞಾನಿಗಳ ಮೇಲೆ ಆಕ್ರಮಣ ಮಾಡಿರುವ ಪ್ರಕರಣ ನಡೆದಿರುವ ಹಿನ್ನೆಲೆಯಲ್ಲಿ ಇವರಿಗೆ ರಕ್ಷಣೆ ನೀಡಲು ಸರ್ಕಾರ ಕ್ರಮಕೈಗೊಳ್ಳುವುದೇ?

ಮೇಲಿನಂತೆ ಕೈಗೊಂಡ ಕ್ರಮಗಳನ್ನು ಮುಂದುವರೆಸಲಾಗುವುದು.

158 ಶ್ರೀ. ಬಿ.ಝಡ್.ಜಮೀರ್ ಅಹಮದ್ ಖಾನ್
ಮಾನ್ಯ ಮುಖ್ಯಮಂತ್ರಿಯವರು

ಅ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ

ಆ ಹಾಗಿದ್ದಲ್ಲಿ, ಈ ರಸ್ತೆಗಳನ್ನು ದುರಸ್ಥಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದು;

ಕ್ರಮ ಕೈಗೊಳ್ಳಲಾಗುತ್ತಿದೆ. ಈ ಬಗ್ಗೆ ಒಟ್ಟು 9 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಅದರಲ್ಲಿ 5 ಕಾಮಗಾರಿಗಳು ಮುಕ್ತಾಯಗೊಂಡಿದೆ. 2 ಕಾಮಗಾರಿಗಳು ಪ್ರಾರಂಭಿಕ ಹಂತದಲ್ಲಿರುತ್ತದೆ ಮತ್ತು 2 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಇ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ರಸ್ತೆಗಳ ದುರಸ್ಥಿಗಾಗಿ ಸರ್ಕಾರ ಅನುದಾನವನ್ನು ಬಿಡುಗಡೆ ಮಾಡಿದೆಯೇ;

ಹೌದು.

ಈ ಹಾಗಿದ್ದಲ್ಲಿ ಎಷ್ಟು ಪ್ರಮಾಣದಲ್ಲಿ ಅನುದಾನವನ್ನು ಬಿಡುಗಡೆ ಮಾಡಿದೆ; (ವಿವರಗಳನ್ನು ನೀಡುವುದು)?

ರೂ.311.57 ಲಕ್ಷಗಳನ್ನು ಬಿಡುಗಡೆ ಮಾಡಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.